**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ. 297/2022**

**ಚಾಸಾಃ 22/ಪ್ರಾಸಾಃ 10**

**ದಿನಾಂಕಃ 30-06-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| **ಸಾಕ್ಷಿದಾರರ ಹೆಸರು** | ಜಯಂತ ಗೌಳಿ |
|---|---|
| ತಂದೆ/ಗಂಡನ ಹೆಸರು | ಲಲ್ಲು |
| ವಯಸ್ಸು | 46 ವರ್ಷ |
| ಉದ್ಯೋಗ | ಪಿ ಐ ನವನಗರ ಹುಬ್ಬಳ್ಳಿ |
| ವಾಸ | ಹುಬ್ಬಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನಾನು ಜನವರಿ 2022 ರಿಂದ ಮೇ 2022 ರವರೆಗೆ ನಾನು ನರಗುಂದ ಪೊಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ.11-02-2022 ರಂದು ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದು, ತನಿಖೆ ಮುಂದುವರೆಸಿ ಅದೇ ದಿನ ಚಾಸಾ-2, 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ಮಧ್ಯಾಹ್ನ 11.30 ರಿಂದ 12.30 ರವರೆಗೆ ನಿಪಿ-4 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-2 ರಂತೆ ಅಪಘಾತ ಸ್ಥಳದ ಫೋಟೋ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ. ಕಚ್ಚಾ ನಕಾಶೆಯನ್ನು ನಿಪಿ-16 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 12.45 ರಿಂದ 1.45 ರವರೆಗೆ ಠಾಣಾ ಆವರಣದಲ್ಲಿ ಚಾಸಾ 5, 6 ರವರ ಸಮಕ್ಷಮ ಸಿಬ್ಬಂದಿ ಚಾಸಾ-17 ರವರು ಅಪಘಾತ ಸ್ಥಳದಿಂದ ಹಾಜರು ಪಡಿಸಿದ ಬೈಕ ನಂ.ಕೆಎ-26/ಇಡಿ-6742 ನೇದ್ದರ ಕುರಿತು ನಿಪಿ-7 ರಂತೆ ಜಪ್ತು ಪಂಚನಾಮೆ ಜರುಗಿಸಿ, ಸದರಿ ಬೈಕನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ-3 ರಂತೆ ಫೋಟೋ ಪಡೆದಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-8 ರಿಂದ 15 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಬೈಕನ ಮಾಲೀಕರಾದ ಚಾಸಾ-16 ರವರಿಗೆ ನಿಪಿ-14 ರಂತೆ ಮೋಟಾರ ವಾಹನ ಕಾಯ್ದೆ ಕಲಂ 136 ಅಡಿ ನೋಟಿಸ ನೀಡಿರುತ್ತೇನೆ. ಸಾಕ್ಷಿಯ

ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅದೆ ದಿನ ಚಾಸಾ 16 ರವರು ನೀಡಿದ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಸದರಿ ಉತ್ತರವನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ದಿಃ19-02-2022 ರಂದು ಮೃತನ ಶವಪರೀಕ್ಷಾ ವರದಿಯನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಿಂದ ಪಡೆದಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಿಃ 05-04-2022 ರಂದು ಆರೋಪಿತನು ಠಾಣೆಗೆ ಹಾಜರಾಗಿದ್ದು ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ, ಜಾಮೀನನ ಮೇಲೆ ಬಿಡುಗಡೆ ಮಾಡಿರುತ್ತೇನೆ, ಅದೇ ಸಮಯದಲ್ಲಿ ಆರೋಪಿತನ ಚಾಲನಾ ಪರವಾನಿಗೆ ಪತ್ರ ಮತ್ತು ವಿಮೆಯ ಪ್ರತಿಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ 16 ರವರಿಂದ ಮುಚ್ಚಳಿಕೆ ಪತ್ರ ಪಡೆದು ಸದರಿ ಬೈಕನ್ನು ಅವರ ಮಧ್ಯಂತರ ಸ್ವಾಧೀನಕ್ಕೆ ಬಿಡುಗಡೆ ಮಾಡಿರುತ್ತೇನೆ, ಸದರಿ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 8 ರಿಂದ 15 ರವರಿಂದ ಆರೋಪಿತನನ್ನು ಗುರುತಿಸಿದ ಬಗ್ಗೆ ಪುನಃ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ 7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ25-04-2022 ರಂದು ಆರೋಪಿತನ ಮತ್ತು ಚಾಸಾ 7 ರವರ ಗಾಯದ ಪ್ರಮಾಣಪತ್ರಗಳನ್ನು ಪಡೆದಿರುತ್ತೇನೆ. ಚಾಸಾ 7 ರವರ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು. ಆರೋಪಿತನ ಗಾಯದ ಪ್ರಮಾಣ ಪತ್ರವನ್ನು ನಿಪಿ-17 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12 (ಎ), 17(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 20 ರವರಿಂದ ವಾಹನ ತಪಾಸಣಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನಿಪಿ-18 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆದು ನನಗೆ ನೀಡಿದ ಬಗ್ಗೆ ಸಿಬ್ಬಂದಿಯವರಿಂದ ಡಿವಿಡಿ ಜೊತೆಗೆ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಡಿವಿಡಿಯನ್ನು ನಿಪಿ-19 ಎಂದು, ಪ್ರಮಾಣ ಪತ್ರವನ್ನು ನಿಪಿಃ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.ನಂತರ ತನಿಖೆ ಪೂರ್ಣಗೊಳಿಸಿ ದಿಃ 25-04-2022 ರಂದು ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ತನಿಖೆ ಸಮಯದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿದ್ದಾನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್ ಬಿ ಕೆ ವಕೀಲರಿಂದ**

ಸ್ಥಳ ಪಂಚನಾಮೆಯ ಪಂಚರಿಗೆ ನೋಟಿಸ ನೀಡಿ ಹಾಜರು ಪಡಿಸಿಕೊಂಡಿರುತ್ತೇನೆ. ಸದರಿ

ನೋಟಿಸನ ಪ್ರತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಆ ರೀತಿ ಪಂಚರಿಗೆ ಯಾವುದೇ ನೋಟಿಸ ನೀಡಿಲ್ಲ ಎಂದರೆ ಸರಿಯಲ್ಲ. ಕಚ್ಚಾ ನಕಾಶೆಯನ್ನು ಪಂಚನಾಮೆ ಸಮಯದಲ್ಲಿ ತಯಾರಿಸಿಕೊಂಡಿರುತ್ತೇನೆ. ನನ್ನ ಸೂಚನೆ ಮೇರೆಗೆ ಕಚ್ಚಾ ನಕಾಶೆಯನ್ನು ಸಿಬ್ಬಂದಿ ತಯಾರಿಸಿರುತ್ತಾರೆ. ಸದರಿ ನಕಾಶೆಯನ್ನು ಸಿಬ್ಬಂದಿ ಮೂಲಕ ಸ್ಥಳದಲ್ಲಿಯೇ ತಯಾರಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಮ್ಮನ ಗುಡ್ಡದ ಜಾತ್ರೆಯ ಸಮಯದಲ್ಲಿ ನರಗುಂದ ಪಟ್ಟಣದಲ್ಲಿ ಹೆಚ್ಚಿನ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಚಕ್ಕಡಿಗಳು, ಟ್ರ್ಯಾಕ್ಟರಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ 4 ದಿಕ್ಕಿನಲ್ಲಿಯೂ ದಾರಿ ಇದೆ ಎಂದರೆ ಸರಿಯಲ್ಲ, 3 ದಿಕ್ಕಿನಲ್ಲಿ ಮಾತ್ರ ಇದೆ. ಸದರಿ 3 ದಿಕ್ಕುಗಳನ್ನು ಕಚ್ಚಾ ನಕಾಶೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ, ತೋರಿಸಿದ್ದೇನೆ. ಠಾಣೆಯಿಂದ ಬಸವೇಶ್ವರ ವೃತ್ತ ಅಂದಾಜು 300-400 ಮೀ. ಅಂತರದಲ್ಲಿದೆ. ಜಾತ್ರೆ ಸಮಯದಲ್ಲಿ ಸಂಚಾರ ನಿಯಂತ್ರಿಸಲು ಬಸವೇಶ್ವರ ವೃತ್ತದಲ್ಲಿ ಸಿಬ್ಬಂದಿಗಳನ್ನು ನೇಮಿಸಿರುತ್ತೇವೆ ಎಂದರೆ ಸರಿ. ಸದರಿ ದಿನ ಸದರಿ ವೃತ್ತದಲ್ಲಿ ಯಾವ ಸಿಬ್ಬಂದಿ ನೇಮಿಸಲಾಗಿತ್ತು ಎಂಬ ಬಗ್ಗೆ ನೆನಪಿಲ್ಲ. ಪಂಚನಾಮೆ ಸಮಯದಲ್ಲಿ ಬೈಕ ಸ್ಥಳದಲ್ಲಿ ಇರಲಿಲ್ಲ. ಠಾಣಾ ಆವರಣದಲ್ಲಿ ಚಾಸಾ 17 ರವರು ಹಾಜರು ಪಡಿಸಿದ ಬೈಕನ್ನು ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಠಾಣೆಯಲ್ಲಿಯೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದೇನೆ, ಸಮಯ ನೆನಪಿಲ್ಲ. ಹೇಳಿಕೆಗಳನ್ನು ನೀಡುವಂತೆ ಸಾಕ್ಷಿದಾರರಿಗೆ ನೋಟಿಸ ನೀಡಿಲ್ಲ. ಆ ರೀತಿ ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಬೈಕ ಮಾಲೀಕ ಚಾಸಾ 16 ರವರಿಗೆ ನೋಟಿಸ ನೀಡಿ ಉತ್ತರ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಮೃತನ ಶವಪರೀಕ್ಷಾ ವರದಿ ಮತ್ತು ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಚ್ಚಳಿಕೆ ಪತ್ರ ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಗುರುತಿಸಿದ ಬಗ್ಗೆ ಸಾಕ್ಷಿದಾರರ ಹೇಳಿಕೆ ಪಡೆದ ಸಮಯ ನೆನಪಿಲ್ಲ. ಆ ರೀತಿ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ವಾಹನ ತಪಾಸಣಾ ವರದಿ ಮತ್ತು ಇತರ ದಾಖಲೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಎಲ್ಲ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರ ಮತ್ತು ಸಿಡಿಯನ್ನು ಸಿಬ್ಬಂದಿಯಿಂದ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಿಯಾದ ತನಿಖೆ ಕೈಗೊಳ್ಳದೆ ಮೃತನ ವಾರಸುದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗುವಂತೆ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಒ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ